ಶ್ರೀ ಜಿ. ರಾಮೇಗೌಡ.—ಈ ವಿಚಾರ ಕೋರ್ಟಿಗೆ ಹೋಗಿದೆ, ಇದರ ಬಗ್ಗೆ ನಾನು ಏನೂ ಹೆಚ್ಚಿಗೆ ಹೇಳಲಾರೆ.

ಶ್ರೀ ವಿ. ಎಂ.ಘಾಡಿ – ಕೋರ್ಟಿಗೆ ಹೋಗಿರೋದು ಕ್ರಿಮಿನಲ್ ಕೇಸ್‌ಗೆ ಸಂಬಂಧಪಟ್ಟದು. ಯಾವ ವರ್ಷ ಪ್ಲಾಂಟೇಷನ್ ಮಾಡಿದ್ದಾರೆ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಜಿ. ರಾಮೇಗೌಡ.—ನನ್ನಲ್ಲಿರತಕ್ಕ ಮಾಹಿತಿ ಮೇರೆಗೆ ಸುಗ್ರೀವಾಜ್ಞೆ ಬಂದಮೇಲೆ ಅತ್ರಿ ಕ್ರಮಣ ಮಾಡಿದ್ದಾರೆ.

ಶ್ರೀ ವಿ. ಎಂ. ಘಾಡಿ.—ಯಾವ ವರ್ಷದಲ್ಲಿ ಏರಿಯಾ ಕ್ಲಿಯರೆನ್ಸ್ ಆಯಿತು ? ಯಾವ ವರ್ಷದಲ್ಲಿ ಪ್ಲಾಂಟೇಷನ್ ಮಾಡಿದ್ದಾರೆ ?

ಶ್ರೀ ಜಿ. ರಾಮೇಗೌಡ.—ಕ್ಲಿಯರೆನ್ಸ್ ತಾರೀಖು ನನ್ನಲ್ಲಿ ಇಲ್ಲ, ಮಾನ್ಯ ಸದಸ್ಯರಿಗೆ ಬೇಕಾದರೆ ತಿಳಿಸುತ್ತೇನೆ.

Starting of Agricultural College at Shimoga

178 SRI G. BASAVANNAPPA (Holehonnur).—Will the Minister for Agriculture and Parliamentary Affairs be pleased to state —

(a) whether there is any proposal before the Government for Starting an Agricultural College in Shimoga ;

(b) if so, at what stage is the proposal ?

SRI K. H. RANGANATH, (Minister for Agricu'ture and Parliamentary Affairs)

(a) No.

(b) Does not arise

ಶ್ರೀ ಜಿ. ಬಸವಣ್ಣಪ್ಪ.—ಇಡೀ ಮಲೆನಾಡಿನಲ್ಲಿಯೇ ಸರ್ಕಾರೀ ಟೆಕ್ನಿಕಲ್ ಕಾಲೇಜು ಇಲ್ಲ. ಶಿವಮೊಗ್ಗ ಜಿಲ್ಲೆ ವ್ಯವಸಾಯ ಪ್ರಧಾನವಾದ ಜಿಲ್ಲೆಯಾಗಿದ್ದು ಅಲ್ಲಿ ಒಂದು ಕೃಷಿ ಕಾಲೇಜು ಇಲ್ಲ? ಇವತ್ತು ಕೃಷಿಯನ್ನು ವೈಜ್ಞಾನಿಕವಾಗಿ ಮಾಡಬೇಕಾದರೆ ಕೃಷಿ ಕಾಲೇಜಿನ ಅವಶ್ಯಕತೆ ಇದೆ. ಆದುದರಿಂದ ಈ ಬಗ್ಗೆ ಸರ್ಕಾರದವರು ಮರು ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಕೆ. ಹೆಚ್. ರಂಗನಾಥ್.—ಸಮಯ ಬಂದಾಗ ಮರು ಪರಿಶೀಲನೆ ಮಾಡೋಣ.

ಶ್ರೀ ಜಿ. ಬಸವಣ್ಣಪ್ಪ.—ಈಗ ಹಾಲಿ ಇರತಕ್ಕ ಕಾಲೇಜುಗಳಲ್ಲಿ ಅಡ್ಮಿಷನ್‌ಗೆ ತೊಂದರೆಯಿರುವುದರಿಂದ ಬೇರೆ ಕಡೆ ಕಾಲೇಜು ಸ್ಥಾಪನೆ ಮಾಡುವಂತ ಯೋಚನೆ ಸರ್ಕಾರಕ್ಕಿದೆಯೆ ?

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಅಡ್ಮಿಷನ್‌ಗೆ ತೊಂದರೆಯಿರುವುದರಿಂದ ಬೇರೆ ಕಾಲೇಜು ಸ್ಥಾಪನೆ ಮಾಡಿ ಎನ್ನುವ ಅಭಿಪ್ರಾಯ ಸರ್ಕಾರ ಒಪ್ಪುವುದಿಲ್ಲ. ಏಕೆಂದರೆ, ನಮಗೆ ಎಷ್ಟು ಜನ ವ್ಯವಸಾಯ ಪದವೀಧರರು ಬೇಕೋ ಅಷ್ಟು ಜನರನ್ನು ತಯಾರು ಮಾಡುವುದಕ್ಕೆ ಇಂದು ಸಾಧ್ಯ ಇದೆ. ಆದರೆ, ಬೇರೆ ಕಾರಣದಿಂದ ಸರ್ಕಾರ ಯೋಚನೆ ಮಾಡತಕ್ಕದ್ದು ಇದೆ.

ಶ್ರೀ ಎಸ್. ಎಂ. ಶೀರ್ನಾಳಿ ಜಂದ್ರಶೇಖರ್.—ಸ್ವಾಮಿ, ಶಿವಮೊಗ್ಗ ಜಿಲ್ಲೆಯನ್ನು ಹಳೇ ಮೈಸೂರು ಕಾಲದಲ್ಲಿ ಬತ್ತದ ಕಣಜ ಎಂದು ಕರೆಯುತ್ತಿದ್ದರು, ಇಂದಿಗೂ ಆ ಹೆಸರು ಇದೆ. ವ್ಯವ

ಸಾಯಕ್ಕೆ ಪ್ರಧಾನವಾದ ಈ ಜಿಲ್ಲೆಯಲ್ಲಿ ಒಂದು ಕೃಷಿ ಕಾಲೇಜನ್ನು ಸ್ಥಾಪಿಸಿ ಮಾಡಬೇಕೆಂದು ಅನೇಕ ವರ್ಷಗಳಿಂದ ಕೇಳುತ್ತಿದ್ದರೂ ಸರ್ಕಾರ ಏತಕ್ಕೆ ಪರಿಶೀಲನೆ ಮಾಡುತ್ತಿಲ್ಲ ?

ಶ್ರೀ ಕೆ. ಹೆಚ್. ರಂಗನಾಥ್.—ಬತ್ತದ ಕಣಜ ಆದ ಕೂಡಲೇ ಕಾಲೇಜು ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ. ಇವತ್ತು ನಮ್ಮಲ್ಲಿ ಆಹಾರ ಧಾನ್ಯಗಳು ಹೆಚ್ಚಾಗಿವೆ, ಬೇರೆ ಬೇರೆ ಧಾನ್ಯಗಳನ್ನು ಹೆಚ್ಚಿಗೆ ಬೆಳೆಯಬೇಕಾಗಿದೆ. ಕಾಲೇಜು ಮಾಡುವ ಕಾಲ ಬಂದಾಗ ಯೋಚನೆ ಮಾಡೋಣ.

ಅಧ್ಯಕ್ಷರು.—ಪ್ರಭಾಕರ್ ತೇಲ್ಕರ್‌ರವರ ಪ್ರಶ್ನೆ ನಂ. ೧೯೫ ತಡೆಹಿಡಿಯಲಾಗಿದೆ.

ಶ್ರೀ ಎಸ್. ಎಂ ಶಿರ್ನಾಳಿ ಚೆಂನ್ನಬಸಪ್ಪಶೆಟ್ಟರ್.—ಅಧ್ಯಕ್ಷರೇ, ಪ್ರೇಕ್ಷಕರ ಗ್ಯಾಲರಿಗೆ ಪ್ರವೇಶಾವಕಾಶವನ್ನು ನಿಲ್ಲಿಸಿದ್ದಾರೆ. ನಮ್ಮಿಂದ ಪಾಸು ತೆಗೆದುಕೊಂಡು ಬರತಕ್ಕವರು ಯಾರು ಗಲಾಟೆ ಮಾಡುವುದಿಲ್ಲ. ಅವಕಾಶ ಕೊಡುವ ವ್ಯವಸ್ಥೆ ಮಾತಿ.

ಅಧ್ಯಕ್ಷರು.—ತಾವು ಮಧ್ಯಾಹ್ನ ಬಂದು ನೋಡಿ, ಇವನ್ನೆಲ್ಲಾ ವಿಚಾರ ಮಾಡಿ ನೋಡುತ್ತೇನೆ. ಈಗ ಪ್ರಶ್ನೋತ್ತರಗಳು ಮುಗಿದವು.

QUESTIONS FOR ANSWERS ON THE DAY
(but not taken up)

Distribution of Lands to Harijans and Girijans, in Mysore

83. SRI H. GANGADHARAN (Chamaraja)—Will the Minister for Revenue be pleased to state :—

the extent of land granted by the Government to Harijans and Girijans in the Taluks of Mysore District during last three years talukwise and yearwise figures may be furnished) ?

SRI B. BASAVALINGAPPA (Minister for Revenue)—During the last three years (*viz.*, 1974-75, 1975-76 and 1976-77) an extent of 5866 acres and 28 Guntas of land has been granted to the Harijans and Girijans of Mysore District. Statement Appended.